**14**

# ಐಶ್ವರ್ಯದಿಂದುಂಟಾಗುವ ನಾಶನ (5:1-6)

ಅಂತರ ರಾಜ್ಯದ ದಾರಿಯಲ್ಲಿ ಒಬ್ಬ ಮನುಷ್ಯನು ತನ್ನ ವಾಹನವನ್ನು ಚಲಿಸಿಕೊಂಡು ಹೋಗುವಾಗ ಅವನ ಮುಂದಾಗಿ ಶಸ್ತ್ರಾಸ್ತ್ರಗಳನ್ನು ಒಯ್ಯುತ್ತಿದ್ದ ವಾಹನದ ಬಾಗಿಲು ರಭಸದಿಂದ ತೆರೆಯಲ್ಪಟ್ಟು ಅದರೊಳಗಿಂದ ಹಣವು ಹೆದ್ದಾರಿಯಲ್ಲಿ ಚೆಲಲ್ಪಟ್ಟಿತ್ತು. ಈ ಕುರಿತಾಗಿ ಜಹಿಯೋ ಪ್ರದೇಶದ ಸುದ್ಧಿ ಮಾದ್ಯಮದಲ್ಲಿ ಓದಿರುವದನ್ನು ನೆನಪು ಮಾಡಿಕೊಳ್ಳುವಿರಾ? ಅಲ್ಲಿ 2 ಮಿಲಿಯನ್ ಡಾಲರುಗಳು ಹೆದ್ದಾರಿಯಲ್ಲಿ ಚೆಲ್ಲಲ್ಪಟ್ಟಿದ್ದವೆಂದು ಅಂದಾಜಿಸಲಾಗಿದೆ, ಮತ್ತು ಈ ಮನುಷ್ಯನು ಅಲ್ಲಿ ನಿಂತು ಸುಮಾರು ಒಂದು ಲಕ್ಷದ ಐವತ್ತು ಸಾವಿರ (150, 000) ಡಾಲರುಗಳನ್ನು ಸಂಗ್ರಹಿಸಿಕೊಂಡನು. ಅವನ ಅರ್ಧಗಂಟೆಯ ಆಶ್ಚರ್ಯ ಮತ್ತು ಮೂರ್ಖತನವಾದ ಕ್ರಿಯೆಯಾಗಿತ್ತು. ಅದು ವಿಚಿತ್ರವು ಮತ್ತು *ನ್ಯಾಷನಲ್ ಎನ್‌ಕ್ವರರ್* ಎಂಬ ವೃತ್ತ ಪತ್ರಿಕೆಯ ತಲೆಬರಹವು ಆಗಿತ್ತು. ಜಾನಿ ಕರ್‍ಸನ್‌ರವರು ಈ ಮನುಷ್ಯನನ್ನು ವೇದಿಕೆಗೆ ಆಹ್ವಾನಿಸಿ ಅವನ ಪ್ರತಿಕ್ರಿಯೆಯ ವಿವರಣೆಯನ್ನು ಪ್ರಚಾರಮಾಡಿದರು.

ನನ್ನ ವೈಯಕ್ತಿಕವಾದ ಅಭಿಪ್ರಾಯವೇನೆಂದರೆ ನಮ್ಮ ಸಮಾಜವು ಐಶ್ವರ್ಯಕ್ಕಾಗಿ ಹಾತೋರೆಯುವಂತದ್ದು ಮತ್ತು ಹಣದಿಂದಾಗುವ ಸಂಗತಿಗಳಿಗೆ ಆಶೆಪಡುವಂತದ್ದಾಗಿದೆ. ಅಷ್ಟೊಂದು ಹಣವನ್ನು ಹಿಂತಿರುಗಿಸಿದ ಮನುಷ್ಯನ ಬಗ್ಗೆ ಆಶ್ಚರ್ಯವುಂಟಾಗುತ್ತದೆ, ಯಾಕಂದರೆ ಆ ಹಣವು ಅವನಿಗೆ ವೇಗವಾಗಿಯೂ ಮತ್ತು ಸರಳವಾಗಿಯೂ ದೊರಕಲ್ಪಟ್ಟಿತ್ತು. ಇದು ಸತ್ಯವಾದದ್ದೆ ಏಕೆಂದರೆ ವೇಗವಾಗಿ ಹಣವನ್ನು ಗಳಿಸಿ ಐಶ್ವರ್ಯವಂತರಾಗುವದಕ್ಕೆ ನಮ್ಮ ಸಮಾಜದಲ್ಲಿರುವ ಅಂಗಡಿಗಳಲ್ಲಿ ಅನೇಕ ಪುಸ್ತಕಗಳು ದೊರೆಯುತ್ತವೆ. ಮತ್ತು ನಮ್ಮ ದೂರದರ್ಶನದ ಕಾರ್ಯಕ್ರಮಗಳು ಪ್ರಸಿದ್ಧಿಯಾಗುವದಕ್ಕೂ ಮತ್ತು ಐಶ್ವರ್ಯವಂತರಾಗುವದಕ್ಕೂ ಪ್ರಬೋಧನೆಯನ್ನು ನೀಡುತ್ತವೆ. ನಮ್ಮ ಮಾನಸಿಕವಾದ ಪರಿಣಾಮಗಳು ಹಾಗೂ ಹಗಲುಗನಸುಗಳೇನೆಂದರೆ 10 ಮಿಲಿಯನ್ ಡಾಲರ್‌ಗಳ ಬಹುಮಾನವನ್ನು ಪಡೆದಾಗ "ನಮ್ಮ ಜೀವಿತದ ಪರಿಸ್ಥಿತಿ ಏನಾಗಿರಬಹುದೆಂದು ಪರಿತಪಿಸುತ್ತದೆ"?

ಗ್ರಂಥಗಳನ್ನು ಗಂಭೀರವಾಗಿ ದ್ಯಾನಿಸಿದರೆ ಐಶ್ವರ್ಯವು ಪಾಪವಲ್ಲವೆಂದು ಅವುಗಳು ಸೂಚನೆಯನ್ನು ನೀಡುತ್ತದೆ. ಉದಾಹರಣೆಗೆ, ಅಬ್ರಹಾಮನು ಬಹಳ ಐಶ್ವರ್ಯವಂತನಾಗಿದ್ದನು, ಮತ್ತು ಅವನು ದೇವರೊಂದಿಗೂ ನಡೆದನು. ಭೂಲೋಕದ ಆಶೀರ್ವಾದಕ್ಕಾಗಿ ಅವನು ಉಪಯೋಗಿಸಲ್ಪಟ್ಟನು. ನಮಗೆ ದೊರಕಿರುವಂತ ದೈಹಿಕ ಸ್ವಾಸ್ಥ್ಯವನ್ನು ವಿವೇಕಪೂರ್ವಕವಾಗಿ ಉಪಯೋಗಿಸಬೇಕೆಂದು ಮತ್ತು ದೇವರ ಸೇವೆಗಾಗಿಯೂ ಮತ್ತು ಇತರರ ಸೇವೆಗಾಗಿಯೂ ಅದು ಸದುಪಯೋಗವಾಗಬೇಕು.

ಯಾಕೋಬ 5:1-6ರ ನಮ್ಮ ಪಾಠದಲ್ಲಿ, ಐಶ್ವರ್ಯದಿಂದುಂಟಾಗುವ ಅಪಾಯಗಳ ಬಗ್ಗೆ ತಿಳಿಸಲಾಗಿದೆ - ಮತ್ತು ಹಣವು ನಮಗೆ ಏನನ್ನು ಮಾಡಬಹುದೆಂದು ತಿಳಿಸಲಾಗಿದೆ. ಯಾಕೋಬನು ಐಶ್ವರ್ಯವಂತರ ಜೊತೆಯಲ್ಲಿ ಮಾತನಾಡುತ್ತಾ ಐಶ್ವರ್ಯದ ಒಳಿತು ಹಾಗೂ ಅದರ ನಿಂದನೆಯ ಕುರಿತು ನೇರವಾಗಿ ಹೇಳುತ್ತಿದ್ದಾನೆ. ಅವರ ವಿಶ್ವಾಸಿಗಳು ಬಡವರೋ ಶ್ರೀಮಂತರೋ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಈ ಸಂದರ್ಭದಲ್ಲಿ ಯಾಕೋಬನು ತನ್ನ ಓದುಗರ ಬದಲಾವಣೆಯನ್ನು ತೋರಿಸಿ ಅನ್ಯರಾದ ಐಶ್ವರ್ಯವಂತರ ಕುರಿತು ತಿಳಿಸಿದ್ದಾನೆಂದು ಅನೇಕ ಬರಹಗಾರರು ದೃಷ್ಟಿಯನ್ನು ಇಡುತ್ತಾರೆ. ನನ್ನ ವೈಯಕ್ತಿಕವಾದಂತ ನಿರ್ಣಯವೇನೆಂದರೆ ಯಾಕೋಬನು ಇಲ್ಲಿ ವಿಶ್ವಾಸಿಗಳನ್ನೆ ಕುರಿತು ಮಾತನಾಡುತ್ತಿದ್ದಾನೆ.

ಇದನ್ನು ನಾನು ನಂಬುವದಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ, ಐಶ್ವರ್ಯವಂತರ ಮತ್ತು ಬಡವರ ಕುರಿತಾದ ಸಮಸ್ಯೆಗಳು ಯಾಕೋಬನ ಆಲೋಚನೆಯಲ್ಲಿ ಉದ್ಭವಿಸಿದ್ದವು (1:9-11; 2:1-13; 4:13-17). ನಂತರ, ಯಾಕೋಬನ ಪತ್ರಿಕೆಯನ್ನು ಸಭೆಯಲ್ಲಿ ಓದುವಾಗ ಐಶ್ವರ್ಯವಂತರೂ ಸಹ ಅಲ್ಲಿದ್ದರೆಂಬ ಸೂಚನೆಯದಾಗಿರುತ್ತದೆ. ಅಂತಿಮವಾಗಿ, ಐಶ್ವರ್ಯವುಳ್ಳಂತ ವ್ಯಕ್ತಿಗಳು ಕ್ರೈಸ್ತರಾಗಿದ್ದರೂ ಎಂಬುದಾಗಿ ದೃಢವಾಗಿ ಹೇಳಲು ಸಾಧ್ಯವಿಲ್ಲ, ಈ ವಿಷಯಗಳನ್ನು ನಮ್ಮ ಜೀವಿತಕ್ಕೆ ಹೇಗೆ ಅಳವಡಿಸಿಕೊಳ್ಳೋಣ?

ಐಶ್ವರ್ಯದಿಂದುಟಾಗುವ ಖಂಡನೆಯನ್ನು ಯಾಕೋಬನು ಸ್ಪಷ್ಟಪಡಿಸುತ್ತಾ, ದೇವರು ನಮಗೆ ಅನುಗ್ರಹಿಸಿರುವ ಯಾವುದೇ ಆಶೀರ್ವಾದಗಳು ಐಶ್ವರ್ಯವಾಗಿರಬಹುದೆಂದು ತಿಳಿಸುತ್ತಾನೆ. ದೇವರೊಂದಿಗೆ ನಾವು ನಡೆಯುವಾಗ ಇವುಗಳನ್ನು ಉತ್ತಮ ಸಾಧನಗಳನ್ನಾಗಿ ನಾವು ಉಪಯೋಗಿಸಬೇಕು.

## ಐಶ್ವರ್ಯವಂತರ ಪಶ್ಚಾತ್ತಾಪದ ಕರೆ (5:1)

ಯಾಕೋಬನು 5:1 ತಿಳಿಸುತ್ತಾನೆ, "ಧನಿಕರೇ, ಕೇಳಿರಿ ನಿಮಗೆ ಬರುವ ದುರ್ದಶೆಗಳಿಗಾಗಿ ಕಣ್ಣೀರಿಡಿರಿ, ಗೋಳಾಡಿರಿ," ಅವರು ಪಶ್ಚಾತ್ತಾಪ ಪಡಬೇಕೆಂಬ ಕರೆಯನ್ನು ನೀಡಲಾಗಿದೆ. ತಮ್ಮ ಐಶ್ವರ್ಯದ ನಿಮಿತ್ತ ತಮ್ಮ ಹೃದಯಗಳನ್ನು ಮತ್ತು ತಲೆಗಳನ್ನು ತಿರುಗಿಸಿಕೊಂಡವರನ್ನು ಯಾಕೋಬನು ಗದರಿಸುತ್ತಿದ್ದಾನೆ.

ಅವರ ಮುಂದಿನ ಸಂಕಟಗಳನ್ನು ನೆನಪು ಮಾಡುವಾಗ, ಅವರು ಮಾನಸಾಂತರ ಪಟ್ಟು ಕೂಗುತ್ತಾ ದುಃಖಿಸುವರು. ಇಲ್ಲಿ ಬಳಸಿರುವ ಎರಡು ಪದಗಳು, ವಿಶೇಷವಾದ ಹಿನ್ನೆಲೆಯ ಅರ್ಥವನ್ನು ಹೊಂದಿರುತ್ತದೆ (ಲೂಕ 22:62)ರಲ್ಲಿ ಪೇತ್ರನು ಮಾನಸಾಂತರಪಟ್ಟು ದುಃಖಪಟ್ಟ ವಿಷಯಕ್ಕೆ ಸಂಬಂಧಿಸಿದ ಗ್ರೀಕ್ ಪದವನ್ನೆ ಉಪಯೋಗಿಸಲಾಗಿದೆ. "ದುಃಖಿಸು" ಎಂಬದನ್ನು ಗ್ರೀಕ್ ಅನುವಾದದಲ್ಲಿ ಓನಾಮ್ಯಾಟೋಫೋಯೆರ್ ಎನ್ನುವರು (ಆ ಪದದ ಶಬ್ದದಲ್ಲಿಯೇ ಅದರ ಅರ್ಥ ಅಡಕವಾಗಿದೆ). "ದುಃಖಿಸು" ಎಂಬ ಪದದ ಬದಲು ಚಿತ್ಕಾರ ಎಂಬ ಪದವನ್ನು ಈ ವ್ಯಾಖ್ಯಾನದಲ್ಲಿ ಬಳಸಬಹುದು. ಹಳೆ ಒಡಂಬಡಿಕೆಯಲ್ಲಿ, ದೇವರ ಕೋಪಕ್ಕೆ ತುತ್ತಾದ ಪ್ರವಾದಿ ಜನರು ಈ ವಿಧವಾಗಿ ಗೋಳಾಡುತ್ತಿದ್ದರು ಎಂಬ ಸಂಕೇತವಾಗಿದೆ (ಯೆಶಾಯ 13:6; 14:31; 15:2, 3). "ಮುಂದೆ ಉಂಟಾಗುವ ಸಂಕಟ" ಕರ್ತನ ನ್ಯಾಯತೀರ್ಪಿನ ದಿನವನ್ನು ನೆನಪುಮಾಡುತ್ತದೆ.

ಈ ಒಂದು ಕರೆಯನ್ನು ಯಾಕೋಬನು ಪ್ರತಿಯೊಬ್ಬ ಧನಿಕನಿಗೂ ಮತ್ತು ಧನಿಕನಾದ ಕ್ರೈಸ್ತನಿಗೂ ಪ್ರಬೋಧನೆಯನ್ನು ನೀಡುತ್ತಿರುವದಿಲ್ಲ. ಅದನ್ನು ವಿಶೇಷವಾದ ಜನರಿಗೆ ತಿಳಿಸುತ್ತಿದ್ದಾನೆ. ಪ್ರತಿಯೊಬ್ಬ ಧನಿಕನ ಪಾಪವನ್ನು ಈ ವಿಶೇಷವಾದ ಜನರಿಗೆ ಹೋಲಿಸುತ್ತಿರುವದಿಲ್ಲ. ಕೆಟ್ಟತನವನ್ನು ಹೊಂದಿದ್ದ ಧನಿಕರಿಗೂ ಮತ್ತು ಒಳ್ಳೆಯತನವನ್ನು ಹೊಂದಿದ್ದ ಬಡವರಿಗೂ ಸದ್ಗುಣಗಳ ಕುರಿತು ಬೈಬಲಿನ ಬರಹಗಾರರು ತಿಳಿಸುತ್ತಿದ್ದಾರೆ. "ಐಶವರ್ಯವಂತನು ದೇವರ ರಾಜ್ಯದಲ್ಲಿ ಸೇರುವದಕ್ಕಿಂತ ಒಂಟೆಯು ಸೂಜಿಕಣ್ಣಿನಲ್ಲಿ ನುಗ್ಗಿ ಹೋಗುವುದು ಸುಲಭ" ಎಂದು ಹೇಳಿರುವ ಯೇಸುವಿನ ಮಾತಿಗೆ ಸಮನಾಗಿದೆ (ಮಾರ್ಕ 10:25).

## ಧನಿಕರ ಅಪರಾಧದ ಖಂಡನೆ (5:2-6)

ಇತಿಹಾಸಕಾರರ, ಪ್ರಕಾರ ಬೈಬಲ್ ಕಾಲದಲ್ಲಿ ಮೂರು ವಿಧವಾದ ರೀತಿಯಲ್ಲಿ ಐಶ್ವರ್ಯವು ಪ್ರದರ್ಶಿತವಾಗುತ್ತಿತ್ತು. ತಿನ್ನುವುದು, ವಸ್ತ್ರಧರಿಸುವುದು, ಮತ್ತು ಹಣವನ್ನು ವ್ಯಹಿಸುವುದು ವಚನ 2 ಮತ್ತು 3ರಲ್ಲಿ ಯಾಕೋಬನು ಎತ್ತಿ ಹಿಡಿದಿದ್ದಾನೆ. ವಚನ 2ರಲ್ಲಿ ಅವನು ತಿಳಿಸಿ, "ನಿಮ್ಮ ಧನವು ನಾಶವಾಗಿದೆ, ..." "ನಾಶ" ಎಂಬ ಪದದ ಅರ್ಥ ಅಕ್ಷರಶಃ

“ಕೊಳೆಯುವಿಕೆ” ಎಂಬುದಾಗಿದೆ. ಅದು ಆಹಾರದ ಸರಭರಾಜಿಗೂ ಅನ್ವಹಿಸುತ್ತದೆ. ಅದರ ಪರಿಣಾಮವೇನೆಂದರೆ: “ಉಪಯೋಗಕ್ಕಿಂತಲೂ ನೀನು ಹೆಚ್ಚಾಗಿ ಹೊಂದಿರುವಿ, ಅದು ಉಪಯೋಗಕ್ಕೆ ಬರುವ ಒಳಗಾಗಿ ಅದು ಕೊಳೆತು ಹೋಗುತ್ತದೆ.”

ಯಾಕೋಬನು ತಿಳಿಸಿ, “... ನಿಮ್ಮ ಬಟ್ಟೆಗಳಿಗೆ ನುಸಿ ಹಿಡಿದಿದೆ” (5:2). ಅವರ ಬಟ್ಟೆಗಳು ಹೆಚ್ಚಾಗಿದ್ದು, ಅದನ್ನು ದಾಸ್ತನು ಮಾಡಿದ್ದರಿಂದ, ಅದು ನುಸಿ ಹಿಡಿದಿತ್ತು, “ನುಸಿಯನ್ನು ಯಾಕೆ ಪೋಷಿಸುತ್ತಿರುವಿರಿ?” ಎಂಬ ಪ್ರಶ್ನೆಯು ಯಾಕೋಬನದಾಗಿರುತ್ತದೆ.

“ನಿಮ್ಮ ಚಿನ್ನ ಬೆಳ್ಳಿಗಳು ಮಣ್ಣು ಹಿಡಿದವೆ ...” ಎಂದು ಯಾಕೋಬನ ತಿಳುವಳಿಕೆ (5:3). ಚಿನ್ನ ಬೆಳ್ಳಿಗಳು ತುಕ್ಕು ಹಿಡಿಯುವದಿಲ, ಎಂಬ ಸಂಗತಿಯನ್ನು ನಾವು ತಿಳಿದಿದ್ದೇವೆ; ಅದು ರೂಪಾಂತರದ ಪದವಾಗಿದೆ. ಅವರು ಅದನ್ನು ಉಪಯೋಗಿಸದೆ ಇದದ್ದರಿಂದ ಅದು ಮಣ್ಣು ಹಿಡಿದಿತ್ತು ಎಂದು ಗದರಿಸುತ್ತಿದ್ದಾನೆ.

ಅವರು ಹೊಂದಿದ್ದ ಸ್ವಾಸ್ಥ್ಯವು ಉಪಯೋದ ಕುರಿತು ಯಾಕೋಬನು ಅಸಂತೋಷ ವಾಗಿದ್ದನು ಎಂಬ ಸೂಚನೆಯನ್ನು ನೀಡುತ್ತದೆ ಈ ಅಂಶವನ್ನು ಒತ್ತಿ ಹೇಳಲಾಗಿದೆ, “... ಅಂತ್ಯ ದಿವಸಗಳು ಬಂದರೂ ದ್ರವ್ಯವನ್ನು ಕೂಡಿಸಿ ಇಟ್ಟುಕೊಂಡಿದ್ದೀರಿ” (5:3). ಅವರು ಧನವನ್ನು ಉಪಯೋಗಕ್ಕೆ ಬಾರದಂತೆ ಕೂಡಿಟ್ಟಿದ್ದರು, ಮತ್ತು ಅದು ಮಣ್ಣು ಹಿಡಿದಿತ್ತು, ಕೊಳೆ ಯುತಿತ್ತು. ಮತ್ತು ನಾಶವಾಗುತ್ತಿತ್ತು. ಅವರ “ದ್ರವ್ಯದಿಂದ” ಉತ್ತಮವಾದ ಕಾರ್ಯಗಳನ್ನು ಮಾಡಲು ಸಾಧ್ಯವಾಗಿದ್ದರು, ಆ ಕಾರ್ಯವನ್ನು ಅವರು ಮಾಡದೆ ಇದದ್ದರಿಂದ; ಅದು ಅವರ ಮೂರ್ಖತನವೂ ಮತ್ತು ಪಾಪವೂ ಆಗಿತ್ತು!

ವಚನ 4ರಲ್ಲಿ ಯಾಕೋಬನು, ನಿರ್ದಿಷ್ಟವಾಗಿ ಹೇಳುವದೇನೆಂದರೆ ಅವರು ದ್ರವ್ಯವನ್ನು ಕೂಡಿಟ್ಟಿರುವುದು ಮಾತ್ರವಲ್ಲದೆ, ಅವರ ಹೊಲಗಳನ್ನು ಕೊಯಿದವರ ಕೂಲಿಯನ್ನು ಅನ್ಯಾಯವಾಗಿ ಹಿಡಿದುಕೊಂಡಿದ್ದರು. ತಕ್ಷಣವೇ ಯಾಕೋಬನು ದೈಹೀಕ ವಿಷಯಗಳಿಂದ, ಆತ್ಮೀಕ ವಿಷಯಗಳ ಕಡೆಗೆ ಗಮನ ಹರಿಸುತ್ತಿದ್ದಾನೆ. ಕೂಲಿಯ ಕುರಿತಾಗಿ ಅವನು ಅಲ್ಪ ಸಮಯವನ್ನು ಕಳೆದಿದ್ದರೂ - ಮತ್ತು ಕೊಯಿದವರ ಕೂಗು ಸಕಲ ಸೇನಾಧಿಪತಿಯಾಗಿರುವ ಕರ್ತನ ಕಿವಿಗಳಲ್ಲಿ ಬಿದ್ದಿದೆ; ಅವರ ಅನ್ಯಾಯವು ದೇವರ ಗಮನಕ್ಕೆ ಬರಲಾಗಿದೆ. ಕೂಲಿಯವರ ಕೂಗನ್ನು ದೇವರು ಸಹಜವಾಗಿ ಕೇಳಿಸಿಕೊಂಡಿದ್ದಾನೆ.

ಯಾಕೋಬನು ವಚನ 5ರಲ್ಲಿ ಮೂರನೇಯ ವಿಷಯವನ್ನು ಪ್ರಸ್ತಾಪಿಸಿದ್ದಾನೆ: “ಭೂಲೋಕ ದಲ್ಲಿ ನೀವು ಅತಿಭೋಗಿಗಳಾಗಿ ನಡೆದು ಮನಸ್ಸು ಬಂದಂತೆ ನಡೆದು ಕೊಂಡಿದ್ದೀರಿ; ವಧೆಯ ದಿವಸ ಬಂದರೂ ನಿಮ್ಮನ್ನು ಕೊಬ್ಬಿಸಿಕೊಂಡಿದ್ದೀರಿ.” ಈ ಧನಿಕ ರಾದ ಕ್ರೈಸ್ತರು ತಮ್ಮ ಜೀವಿ ತವನ್ನು ಐಶ್ವರ್ಯಕ್ಕೆ ಅಳವಡಿಸಿಕೊಂಡಿದ್ದರಿಂದ ಪಾಪಪ್ರಜ್ಞೆಗೆ ಒಳಗಾಗಿದ್ದರು ಕ್ರಿಯಾಪದದ ತರ್ಜುಮೆ “ಜೀವಿಸಿದ್ದಿರಿ” ಅದರರ್ಥ “ಭೋಗದ ಜೀವಿತವನ್ನು ಜೀವಿಸುವದು,” ಕುಡಿದು ಗಲಭೆ ಮಾಡುವದು, ಅಥವಾ ಮೋಜುಮಾಡುವುದು ಈ ಪದಗಳು ಕೆಟ್ಟತನದ ಪದಗಳಾ ಗಿರುತ್ತವೆ. ಈ ವಚನದಲ್ಲಿ “ಅತಿಭೋಗ” ಮತ್ತು “ಮೋಜು” ಎಂಬುದು ವ್ಯತ್ಯಾಸವುಳ್ಳ ಪದ ಮತ್ತು ಅರ್ಥಗಳು ವಿವಿಧವಾಗಿರುತ್ತವೆ. “ಬೋಗ” ಎಂದರೆ ಅನೈತಿಕ ಕಾರ್ಯಕ್ಕೆ ಮೃದುವಾಗಿ ನಡೆಸಲ್ಪಡುವಂತದ್ದು ಎರಡನೆ ಪದದರ್ಥ ಅಳತೆ ಮಟ್ಟವನ್ನು ಮೀರಿ ವ್ಯರ್ಥವಾಗಿ ಬರುವದು ಈ ವಿಧವಾದ ಜೀವಿತವು ವಧೆಯ ಜೀವಿತಕ್ಕೆ ಸಿದ್ದಮಾಡಲ್ಪಟ್ಟದ್ದಾಗಿದೆ. ಯೆರಮೀಯ 12:3ರಲ್ಲಿ ಈ ಆಲೋಚನೆಯು ಗೋಚರವಾಗಿದೆ, ದುಷ್ಟರನ್ನು ಕುರಿಗಳಂತೆ ಎಳೆದು ವಧಿಸುವದಕ್ಕಾಗಿ ಕರ್ತನು ಅವರನ್ನು ಸಿದ್ಧಮಾಡಿದ್ದಾನೆ. ಐಶ್ವರ್ಯವಂತರು ವಧೆಯ ದಿವಸಕ್ಕಾಗಿ ತಮ್ಮನ್ನು ಕೊಬ್ಬಿಸಿಕೊಂಡಿದ್ದಾರೆ, ಪ್ರಾಣಿಗಳು ವಧೆಯ ದಿವಸದಲ್ಲಿ ತಮ್ಮದೇ ಆಹಾರವನ್ನು ಓದಗಿಸುವಂತೆ ಈ ಸಂಗತಿಗಳಿರುವದಾಗಿದೆ.

ವಚನ 6ರಲ್ಲಿ, ಯಾಕೋಬನು ಬಹಳ ಗಂಭೀರವಾದ ವಿಷಯಗಳನ್ನು ಪ್ರಸ್ತಾಪಿಸುತ್ತಿದ್ದಾನೆ: “ನೀತಿವಂತನಿಗೆ ಮರಣದಂಡನೆಯನ್ನು ವಿಧಿಸಿ; ಅವನನ್ನು ಕೊಂದು ಹಾಕಿದ್ದೀರಿ.” ಅವನು

ನಿಮ್ಮನ್ನು ಎದುರಾಯಿಸುವದಿಲ್ಲ NIVಯಲ್ಲಿ ಯಾಕೋಬನ ಓರಟಾದ ಬೋಧನೆಯು ಇರುವದಿಲ್ಲ, ಎಂಬುದು ನನ್ನ ಅಭಿಪ್ರಾಯ ಅವರು ನೀತಿವಂತರನ್ನು ಹಾಗೂ ಮುಗ್ದರನ್ನು ಎದುರಿಸಿರುವದು ಮಾತ್ರವಲ್ಲದೆ, ಎದುರಿಸಲಾರದೇ ಇರುವವರನ್ನು ಎದುರಿಸಿರುವಂತ ಪಾಪಕ್ಕೆ ತುತ್ತಾಗಿದ್ದಾರೆ. ಅವರಲ್ಲಿದ್ದಂತ ಹಣದ ಆಶೆಯ ನಿಮಿತ್ತ, ಅವರ ವರ್ತನೆಗಳಲ್ಲಿ ಕರುಣೆ ಪ್ರೀತಿ ಅಥವಾ ದೈವಿಕ ಜೀವಿತದ ಕೊರತೆಯು ಅವರಲ್ಲಿ ಎದ್ದು ಕಾಣುತ್ತಿತ್ತು. ಅವರ ದುರಾಶೆಯು, ಅಹಾಬ ಮತ್ತು ಇಜೆಬೆಲ್ಲಳ ದುಷ್ಟತನಕ್ಕೆ ಸಮಾನವಾಗಿತ್ತು. ಯಾಕಂದರೆ, ಅವರು ಇಸ್ರೇಲಿನ ವನಾದ ನಾಬೋತನನ್ನು ಕೊಂದು ಅವನ ದ್ರಾಕ್ಷೆ ತೋಟವನ್ನು ವಶಪಡಿಸಿಕೊಂಡಿದ್ದರು (1 ಅರಸು 21).

## ದೇವರ ಅನುಕಂಪವನ್ನು ಪಡೆದುಕೊಳ್ಳುವದು

ದೇವರು ಐಶ್ವರ್ಯಕ್ಕೆ ವಿರುದ್ಧವಾಗಿರುವದಿಲ್ಲ ಆದರೆ ಐಶ್ವರ್ಯದಿಂದುಂಟಾಗುವ ಮನೋಭಾವಕ್ಕೆ ವಿರುದ್ಧವಾಗಿದ್ದಾನೆ. ನಮ್ಮ ಉದ್ದೇಶಗಳು ದ್ರವ್ಯವನ್ನು ಹೊಂದಿಕೊಂಡು ಅದರಿಂದ ಇತರರನ್ನು ಆಶೀರ್ವದಿಸದೆ ಆಶೆಯನ್ನು ಹೊಂದಿದವರಾಗಿದ್ದರೆ ನಾವು ದೋಣಿ ಯನ್ನು ತಪ್ಪಿಸಿ ಕೊಂಡಿದ್ದೇವೆಂದು ಯಾಕೋಬನು ತಿಳಿಸುತ್ತಾನೆ. ವಚನ 2 ಮತ್ತು 3ರಲ್ಲಿ ಈ ವಿಷಯದ ಚಿಂತನೆಯನ್ನು ಕಾಣುತ್ತೇವೆ. ಕ್ರೈಸ್ತರಿಗೆ ಅನುಗ್ರಹಿಸಲ್ಪಟ್ಟ ದ್ರವ್ಯಗಳ ಮೂಲಕ ಇತರರಿಗೆ ಆಶೀರ್ವಾದವುಂಟಾಗಬೇಕು. ಆದುದರಿಂದ ರೋಮಾಪುರ 12ರಲ್ಲಿ "... ಸೋಮವಾರದ ಕುರಿತು ಇತರರ ಕೊರತೆಗಳನ್ನು ನೀಗಿಸಲು ಕೊಡುವಂತ ವರವನ್ನು ಹೊಂದಿರುವನು. ಉದಾರವಾಗಿ ನೀಡು; ..." ಎಂಬುದಾಗಿದೆ.

ದೇವರ ಬೋಧನೆಗಳು ಧನಿಕರ ವಿರೋಧವಾಗಿರುವದಿಲ್ಲ, ಆದರೆ ದ್ರವ್ಯದ ನಿಮಿತ್ತ ವಾಗಿ ಉಂಟಾಗುವಂತ ಆಧ್ಯತೆಗಳಿಗೆ ವಿರುದ್ಧವಾಗಿರುತ್ತದೆ. ಈ ಆದ್ಯತೆಗಳು ಮತ್ತು ಅವುಗಳು ಹೊಂದಾಣಿಕೆಯನ್ನು ಈ ವಾಕ್ಯ ಭಾಗದಲ್ಲಿ ಎತ್ತಿಹಿಡಿಯಲಾಗಿದೆ. ಈ ಕ್ರೈಸ್ತರು ಅನ್ಯಾಯದಿಂದ *ಮತ್ತು* ಕೊಲೆ ಮಾಡುವವರಾಗಿ ದ್ರವ್ಯವನ್ನು ಸಂಪಾದಿಸುತ್ತಿದ್ದರು. ಈ ರೀತಿಯಾಗಿ ಗಳಸಿದ ದ್ರವ್ಯದ ದೆಸೆಯಿಂದ, ಅನೈತಿಕವಾದ ಜೀವಿತದಲ್ಲಿ ಜೀವಿಸುತ್ತಿದ್ದರು.

## ಮುಕ್ತಾಯ

ಧನಿಕರಾಗಿರಲಿ ಬಡವರಾಗಿರಲಿ, ನಾವುಗಳು ನಮ್ಮ ಎಲ್ಲಾ ಕೊರತೆಗಳನ್ನು ಪೂರೈ ಸುವವನ ಮೇಲೆ ಅವಲಂಭಿತರಾಗಿರಬೇಕು. ಧನೈಶ್ವರ್ಯಗಳು, ದೇವರು ನಮ್ಮಲ್ಲಿ ಉಂಟುಮಾಡುವ ಆಶೀರ್ವಾದಗಳಿಗೆ ಸರಿಸಮಾನವಾಗಲಾರದು. ಯೇಸುವಿನ ಮಾತುಗಳು ನಮ್ಮ ಕಿವಿಗಳಲ್ಲಿ ಪ್ರತಿಧ್ವನಿಸುತ್ತದೆ, "ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು? ಅಥವಾ ಒಬ್ಬನು ತನ್ನ ಪ್ರಾಣಕ್ಕೆ ಏನು ಈಡುಕೊಟ್ಟಾನು?" (ಮತ್ತಾಯ 16:26).